ಕೊಳ್ಳುವಾಗ ಅನ್ನಪೂರ್ಣ ಕಾಣಿಸಲಿಲ್ಲ. ಬಾಳೆಹಣ್ಣಿನವನಿಗೆ "ಅಲ್ಲಿ ಮನೆ ಕಟ್ತಾ ಇದಾರಲ್ಲ, ಆ ವಾಚ್‌ಮನ್ ಹೆಂಡ್ತಿಗೆ ಈ ನಾಲ್ಕು ಬಾಳೆಹಣ್ಣು ಕೊಟ್ಟುಬಿಡು" ಎಂದು ಒಟ್ಟು ದುಡ್ಡು ಕೊಟ್ಟಿದ್ದಳು.

ಸಂಜೆ ಆಟಕ್ಕೆ ಬಂದು ಹುಡುಗಿಯರಿಬ್ಬರೂ ''ಪೂರ್ಣಿ ಎಲ್ಲಿ ಆಂಟಿ?'' ಎಂದು ಕೇಳಿದರು. ನಿರ್ಮಲ ಅವಳಿದ್ದ ಶೆಡ್ಡಿನತ್ತ ನೋಡುತ್ತಾ "ಗೊತ್ತಿಲ್ಲಮ್ಮ" ಎಂದಳು. ಅವಳಿಗೆ ಆ ಕಡೆಯಿಂದ ಮಗುವನ್ನು ಎತ್ತಿಕೊಂಡು ಹೆಂಗಸೊಬ್ಬಳು ಬರುತ್ತಿದ್ದುದು ಕಾಣಿಸಿತು. ಅವಳು ಹತ್ತಿರವಾದಂತೆ ಆ ಮಗುವಿನ ಗುರುತು ನಿರ್ಮಲಳಿಗೆ ಹತ್ತಿತು. ಆ ಹೆಂಗಸು ಇವಳ ಬಳಿ ಬಂದು "ನಾನು ಅನ್ನಪೂರ್ಣಳ ಅತ್ತೀರೀ, ಅವಳ ಅಮ್ಮಂಗೆ ಜಡ್ಡಾಗಿದೆ ಅಂತ ಸಂಭಾಳಿಸೋಕ್ಕೆ ಸಾರಕ್ಕಿಗೆ ಹೋಗಿದ್ದಾಳೆ. ಇನ್ನು ಎರಡು ದಿನದಲ್ಲಿ ಬರ್ತಾಳ್ರಿ ಅವ್ವ" ಎಂದಳು. ಆಟಕ್ಕೆ ಬಂದಿದ್ದ ಹುಡುಗಿಯರು "ಸರಿ" ಎಂದು ತಲೆಯಾಡಿಸಿ ಆಟಕ್ಕೆ ಓಡಿದರು.


"ಬೆಳಗ್ಗೆ ಬಾಳೆಹಣ್ಣು ನೀವು ಕಳಿಸಿದ್ದೇನ್ರೀ ಅವ್ವ?" ಎಂದು ಕುತೂಹಲದಿಂದ ಕೇಳಿದಳು.

"ಹೌದು"

"ನಾಳೆಯಿಂದ ಏನಾರ ಹಂಗ ಕೊಡಬೇಕು ಅನ್ನಿಸಿದರೆ ನನ್ನ ಕರೀರಿ ಅವ್ವ. ನಾನೇ ಬಂದು ಒಯ್ತಿನಿ."

"ಅಗ್ಲಿ, ಯಾಕೆ ಒಳ್ಳೆಯ ಬಾಳೆಹಣ್ಣು ಕೊಡಲಿಲ್ವಾ ಅವ್ವ?"

"ಇಲ್ರೀ ಅವ್ವ. ಆತಮಿಳಿನೋರಿಗೆ ನಮ್ಮನ್ ಕಂಡ್ರೆ ಅಸಡ್ಡೇರಿ. 'ನಮ್ಮೋರ್ ಕೆಲಸ ಕಸಿಯೋಕೆ ನೀವು ಬಂದೀರಿ' ಅಂತ ನಮಗೆಲ್ಲಾ ಜರಿತಾರ್ರೀ. ಆ ಬಾಳೆಹಣ್ಣು ನಮ್ಮ ಕೈಗೆ ಕೊಡದೆ ಮರಳಿನ ಮೇಲೆ ಒಗೆದು ಹೋದ, ಹಾಳಾದೋನು. ಹಣ್ಣಿಗೆಲ್ಲ ಮರಳು ಮೆತ್ತಿಕೊಂಡಿತ್ತು."



ನಿರ್ಮಲಳಿಗೆ ಬಾಳೆಹಣ್ಣಿನವನ ಮೇಲೆ ಅಸಾಧ್ಯ ಸಿಟ್ಟುಬಂತು. "ಹೋಗ್ಲಿ ಬಿಡು, ಸಂಜೆ ಇಷ್ಟು ಹೊತ್ತಿಗೆ ಕಾಣ್ತೆಯಲ್ಲ ನಾನೇ ಕೊಡ್ತೀನಿ. ಇಲ್ಲ ಅನ್ನಪೂರ್ಣ ಬಂದ್ರೆ ಅವಳಿಗೆ ಕೊಟ್ಟು ಕಳಿಸ್ತೀನಿ. ನಿನ್ನ ಹೆಸ್ರು?"

"ಮಾದೇವೀನ್ರೀ ಅವ್ವಾ. ಅನ್ನಪೂರ್ಣಳ ಅವ್ವ ನನ್ನ ಗಂಡನ ಸ್ವಂತ ಅಕ್ಕಾರೀ. ಒಂದೇ ಊರ್ನೋರು'' ಅವಳ ಮುಖದ ಮೇಲೆ ಮಂದಹಾಸ ಮೂಡಿತ್ತು.

"ನಾಳೆ ಬರ್ತಾಳೆ ಅಲ್ವಾ ಅನ್ನಪೂರ್ಣ?"

"ನಾಳೆ, ತಪ್ಪಿದರೆ ಆಚೆ ನಾಳೆ ಬರ್ತಾಳ್ರೀ" ಎಂದು ತನ್ನ ಮನೆಯ ಕಡೆ ನಡೆದಳು.

ನಿರ್ಮಲಳು ಮಾಡಬೇಕಿದ್ದ ಐದನೇ ತರಗತಿಯ ಪಾಠಗಳು ಒಂದು ವಾರವಾದರೂ ಪ್ರಾರಂಭವಾಗಲಿಲ್ಲ. ಅಂದು ಸಂಜೆ ಬೀದಿಯಲ್ಲಿ ಏನೋ ಗಲಾಟೆ ಕೇಳಿ ಸುತ್ತಮುತ್ತಲ ಮನೆಯವರೆಲ್ಲರೂ ತಮ್ಮ ಮನೆಗಳಿಂದ ಹೊರಬಂದರು. ಮಾದೇವಿ ಹಾಗೂ ಅವಳ ಗಂಡನಿಗೆ ಕಟ್ಟಡದ ಕಂಟ್ರಾಕ್ಟರ್ ದೊಡ್ಡಧ್ವನಿಯಲ್ಲಿ ಬೈಯುತ್ತಿದ್ದ. ಕೊನೆಗೆ ''ನಾಳೆ ಸಂಜೆವರೆಗೆ ಟೈಮ್ ಕೊಟ್ಟಿದ್ದೀನಿ ಅಷ್ಟೇ!'' ಎಂದು ತನ್ನ ಮೋಟರ್ ಬೈಕಿನಲ್ಲಿ ಹೊರಟುಹೋದ.

ನಿರ್ಮಲಳನ್ನು ನೋಡಿ ಮಾದೇವಿ ಬಂದಳು. ಅವಳ ಕಣ್ಣುಗಳಿಂದ ನೀರು ಹರಿಯುತ್ತಿತ್ತು. "ಇದ್ದಕ್ಕಿದ್ದಂತೆ ಬಂದು ಶೆಡ್ ಖಾಲಿ ಮಾಡು ಅಂತ ಹೇಳಿ ಹೋದ. ಇನ್ನು ಎರಡು ತಿಂಗಳು ಕೂಲಿ ಪೂರ್ತಿ ಕೊಟ್ಟಿಲ್ಲ. ಮುಂದಿನ ವಾರ ಹೊಸಮನೆ ಪೂಜೆ ಇದೆ. ಜಾಗ ಎಲ್ಲ ಕಿಲೀನ್ ಮಾಡ್ಬೇಕಂತೆ. ನಮ್ಮ ನಸೀಬೇ ಇಷ್ಟು. ದೊಡ್ಡ ಮನೆ ಕಟ್ಟಕ್ಕೆ ಮೊದಲು ನಮ್ಮ ಶೆಡ್ ಏಳುತ್ತೆ. ನಮಗೆ ಒಂದು ಸೂರು ಸಿಕ್ಕಿತು ಅನ್ನಿಸುತ್ತೆ. ಆ ಮನೆ ಕಟ್ಟಿದ್ದ ಹಾಗೇ ನಮ್ಮ ಶೆಡ್ ಮುರಿದು ಬೀಳುತ್ತೆ. ನಾವು ಬೀದಿಗೆ ಬರ್ತೀವಿ. ಇದೇ ನಮ್ಮ ಜೀವನ ಆಗಿ ಹೋಯಿತು" ಎಂದು ಅಳುತ್ತಾ ಹೇಳಿದಳು.

ನಿರ್ಮಲಳಿಗೆ ಬಹಳ ಕಸಿವಿಸಿಯಾದರೂ ಏನೂ ಮಾಡದ ಪರಿಸ್ಥಿತಿಯಲ್ಲಿದ್ದಳು. ಅವಳನ್ನು ಸಮಾಧಾನಪಡಿಸಲು ಮಾತನ್ನು ಬೇರೆ ಕಡೆಗೆ ತಿರುಗಿಸಿದಳು.

"ಅನ್ನಪೂರ್ಣ ಬರಲೇ ಇಲ್ವಾ?"

"ಇಲ್ರೀ, ನಾವು ಇಲ್ಲಿ ಖಾಲಿ ಮಾಡಿ ಅವರ ಶೆಡ್‌ಗೆ ಹೋಗಬೇಕು ಅಷ್ಟೇ."

"ಅವಳ ತಾಯಿ ಈಗ ಹುಷಾರಾಗಿದ್ದಾರಾ?"

"ಇಲ್ಲ, ಅದಕ್ಕೆ ನಾನು ಅಲ್ಲಿಗೆ ಹೋಗ್ಲೇಬೇಕು. ಅನ್ನಪೂರ್ಣನು ಈಗ ಅಲ್ಲಿಲ್ಲ"

"ಅಲ್ಲಿಲ್ಲ ಅಂದರೆ!?"

"ನಮ್ಮ ಅತ್ತೆ, ಅದೇ ಅನ್ನಪೂರ್ಣಳ ಅಜ್ಜಿ, ತನ್ನ ಊರಿಗೆ ಕರೆಸಿಕೊಂಡಿದಾಳೆ."

"ಏಕೆ?" ಎಂಬ ನಿರ್ಮಲಳ ಪ್ರಶ್ನೆಗೆ ಮಾದೇವಿಯ ಮುಖದ ಮೇಲೆ ಮಂದಹಾಸ ಸುಳಿಯಿತು.

''ನಮ್ಮ ಅತ್ತೀ, 'ನಂಗೆ ವಯಸ್ಸು ಆಗ್ತಾ ಬಂತು, ಆದಷ್ಟು ಬೇಗ ಕಿರಿಸೊಸೆಗೆ ಮನೆ ಕೆಲಸ ಎಲ್ಲ ಕಲ್ಸಿಬಿಡಬೇಕು, ಲಗ್ನಕ್ಕೆ ಮೊದಲೇ ಎಲ್ಲಾ ಕಲ್ತಿರಬೇಕು' ಅಂತ ಅನ್ನಪೂರ್ಣನ್ನ ಅಲ್ಲಿಗೆ ಕರಿಸಿಕೊಂಡಿದಾಳ್ರೀ ಅವ್ವ.''

"ಅಲ್ಲಾ ಅವಳು ಇನ್ನೂ ಚಿಕ್ಕೋಳು. ಇಷ್ಟು ಬೇಗ ಅವಳಿಗೆ ಮದುವೆ ತಯಾರಿ ಮಾಡ್ತಿದ್ದೀರಲ್ಲ!?"

"ಅವಳ ಕಿರಿಮಗನ ಜೊತೆ ಅನ್ನಪೂರ್ಣಳ ಲಗ್ನ ಅಂತ ನಮ್ಮ ಅತ್ತೀ ಮಾತಿಗೆ ಹಿರಿಯರೆಲ್ಲ ಒಪ್ಪಿ ಆಗಿದೇರೀ. ಬೆಳಗಾದ್ರೆ ದೊಡ್ಡಾಕಿ ಆಗ್ತಾಳಲ್ರಿ. ಮುಂದಿನ ಯುಗಾದಿ ಕಳೆದ ಮೇಲೆ ಅವಳಿಗೆ ಹದಿನೆಂಟು ತುಂಬಿದೆ ಅಂತ ಅದೇನೋ ಪತ್ರ ಮಾಡುಸ್ತಾನಂತೆ, ಆಕೇನ ಮದುವೆಯಾಗೋನು. ಆಮೇಲೆ ಲಗ್ನ" ಎಂದು ಖುಷಿಯಿಂದ ಮುಖ ಇಷ್ಟಗಲ ಮಾಡಿಕೊಂಡು ಹೇಳಿ, ತನ್ನ ಶೆಡ್ಡಿನತ್ತ ನಡೆದಳು.

'ಆ ಮನೆ ಕಟ್ಟಿ ಮುಗಿಯುತ್ತಿದೆ. ಇವರೆಲ್ಲ ಎಲ್ಲಿಂದ ಇನ್ಯಾವುದೋ ನಿವೇಶನದ ಶೆಡ್ಡಿಗೆ ಇವತ್ತಲ್ಲ ನಾಳೆ ಹೋಗ್ತಾರೆ' ಎನ್ನುವುದು ತನಗೆ ಯಾಕೆ ಹೊಳೆಯಲಿಲ್ಲ ಎಂದು ನಿರ್ಮಲ ಯೋಚಿಸಿದಳು. ತಾನು ಅನ್ನಪೂರ್ಣಳಿಗೆ ಐದನೇ ತರಗತಿಯ ಪಾಠಗಳನ್ನು ಮಾಡುವ ಸಂತಸದ ನಿರೀಕ್ಷೆಯಲ್ಲಿ ಹೀಗೆ ಅವರ ಶೆಡ್ ಜೊತೆಗೆ ಕುಸಿದು ಬೀಳುತ್ತದೆ ಎಂದು ಅವಳು ಎಣಿಸಿರಲಿಲ್ಲ.

ಮಾರನೇ ದಿನ ಬೆಳಗ್ಗೆ ತನ್ನ ಗಂಡ ತಂದಿದ್ದ ಎಲ್ಲಾ ಪುಸ್ತಕಗಳನ್ನು ಒಂದು ಚೀಲಕ್ಕೆ ಹಾಕಿ ಮಾದೇವಿಯನ್ನು ಕರೆದು ಕೊಟ್ಟಳು.

"ಏನವ್ವ ಇದು?" ಮಾದೇವಿ ಆಶ್ಚರ್ಯದಿಂದ ಚೀಲವನ್ನು ನೋಡಿದಳು.

"ಅನ್ನಪೂರ್ಣಂಗೆ ಓದಕ್ಕೆ ಹೊಸ ಪುಸ್ತಕಗಳು."

ಈ ಮಾತನ್ನು ಕೇಳಿದೊಡನೆ ಮಾದೇವಿ ಹಾವನ್ನು ಕಂಡವಳಂತೆ ಬೆಚ್ಚಿ, ತನ್ನ ಕೈಯನ್ನು ಹಿಂದಕ್ಕೆ ಎಳೆದುಕೊಂಡಳು.

''ನಾ ಒಲ್ಲೇ ಕಣವ್ವ. ನಾ ಏನಾರ ಇದನ್ನು ಒಯ್ದು ಅವಳಿಗೆ ಕೊಟ್ರೆ, ಅವಳ ಗಂಡ ಆಗೋನು ಅವಳನ್ನ ಬಡಿತಾನೆ ಅಷ್ಟೇ" ಎಂದಳು.

ಅದನ್ನು ಕೇಳಿ ನಿರ್ಮಲ ದಿಗ್ಭ್ರಾಂತಳಾದಳು. 'ಪುಸ್ತಕ ಓದಿದರೆ ಯಾರೋ ಅನ್ನಪೂರ್ಣಂಗೆ ಯಾಕೆ ಹೊಡಿಯಬೇಕು?' ಅನ್ನಿಸಿ ''ಯಾಕೆ?'' ಎಂದು ಕೇಳಿದಳು.

"ಅನ್ನಪೂರ್ಣ 'ನಾ ಶಾಲಿ ಕಲೀಬೇಕು' ಅಂದಿದ್ದಕ್ಕೆ ಆಕೇನ ಲಗ್ನ ಆಗೋನು 'ನಂಗಿಂತ ಹೆಚ್ಚು ಓದಿದ್ರೆ ಲಗ್ನ ಆಗಕ್ಕಿಲ್ಲ' ಅಂತ ಹೇಳಿದ. 'ನೀ ಓದಿ ಪಂಚಾಯ್ತಿ ಮೆಂಬರ್ ಆಗ್ಬೇಕೇನು? ಅದೆಲ್ಲ ಏನು ಬೇಡ. ಮನೆಹೊಲ ನೋಡಿಕೊಳ್ಳೋಕೆ ಶಾಲೆಗೆ ಯಾಕೆ ಹೋಗ್ಬೇಕು?' ಎಂದು ಖಡಾಖಂಡಿತವಾಗಿ ಕಡ್ಡಿಮುರಿದ ಹಾಗೆ ಹೇಳಿದಾನವ್ವ. ಅವ್ವ ಇಲ್ಲಿಗೆ ಬಂದರೆ ನಿಮ್ಮನೆಗೆ ಕಳಿಸ್ತೀನಿ. ನೀವೇ ಅವಳಿಗೆ ಕೊಟ್ಟುಬಿಡಿ" ಎಂದಳು.

"ಅಯ್ಯೋ ಪಾಪ, ಕಲಿಯೋಕೆ ಅವಳಿಗೆ ಎಷ್ಟು ಇಷ್ಟ ಇತ್ತು" ಎಂದು ನಿರ್ಮಲ ನಿಟ್ಟುಸಿರುಬಿಟ್ಟಳು.

"ಬಹಳ ಚೂಟಿ ನಮ್ಮ ಅನ್ನಪೂರ್ಣ. ಅವನಿಗೆ ಕೇಳಿಸ್ದಂಗೆ, 'ಒಂದು ಸಲಿ ಲಗ್ನ ಮುಗೀಲಿ, ನಾನು ಓದೇ ಓದ್ತೀನೀ; ಪಂಚಾಯ್ತಿ ಮೆಂಬರ್ರು ಆಗ್ತೀನಿ. ಅದು ಹ್ಯಾಂಗ ತಡಿತಾನೋ ನಾನು ನೋಡ್ತೀನಿ' ಅಂದ್ಲಂತೆ ಕಣವ್ವ! ನಮ್ಮ ಅತ್ತಿ ನಕ್ಕೋತ ಹೇಳ್ತಿದ್ರು'' ಎಂದು ಹೆಮ್ಮೆಯಿಂದ ಹೇಳಿ, ತನ್ನ ಮನೆಗೆ ಗಂಟುಮೂಟೆ ಕಟ್ಟಲು ಹೋದಳು.

ನಿರ್ಮಲಳಿಗೆ ಅನ್ನಪೂರ್ಣಾಳ ಮದುವೆ ಅಪ್ರಾಪ್ತ ವಯಸ್ಸಿನಲ್ಲಿ ನಡೆಯುವುದು ನಿಶ್ಚಯವಾಗಿ ಹೋಯಿತು. ನಾಳೆ ಬಿದ್ದುಹೋಗುವ ಶೆಡ್ಡಿನಲ್ಲಿ ವಾಸವಿದ್ದರೂ ಆಸಕ್ತಿಯಿಂದ ಓದುವುದನ್ನು ಕಲಿತಿದ್ದ ಅನ್ನಪೂರ್ಣಳಿಗೆ ಊರಿನಲ್ಲಿ ಸ್ವಂತ ಸೂರಿನ ಕೆಳಗೆ ಓದುವ ಅವಕಾಶವೇ ಇಲ್ಲದಂತೆ ಆಗಿದ್ದು ಎಂಥ ವಿಪರ್ಯಾಸ ಎನ್ನಿಸಿಬಿಟ್ಟಿತು. ಅವಳಿಗೆ ತನ್ನ ಗಂಡನನ್ನು ಸರಿಯಾಗಿ ನಿಭಾಯಿಸಿ, ಸಂಸಾರವನ್ನು ತೂಗಿಸುವ ಶಕ್ತಿ, ಜಾಣ್ಮೆ ಎರಡೂ ಬರಲಿ ಎಂದು ಮನದಲ್ಲೇ ಹಾರೈಸಿದಳು.

ನಿರ್ಮಲ ತನ್ನ ಕೈಯಲ್ಲಿದ್ದ ಐದನೇ ತರಗತಿಯ ಹೊಸ ಪುಸ್ತಕಗಳಿದ್ದ ಚೀಲವನ್ನು ಹಳೆಯ ಪೇಪರ್‌ಗಳ ಜೊತೆ ಇಟ್ಟಳು.

ಪ್ರತಿಕ್ರಿಯಿಸಿ: **feedback@sudha.co.in**